# <u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>

## <u>Spl.C.1/2014</u>

**P.W.-09**
**C.W.-31**

| | | |
|---|---|---|
| ಹೆಸರು | : | ರಶ್ಮಿ ಜೆ.ಕೆ. |
| ತಂದೆಯ ಹೆಸರು | : | ಕೃಷ್ಣೇಗೌಡ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಎಸ್.ಪಿ. ಎಸಿಬಿ, ಮೈಸೂರು |
| ವಾಸಸ್ಥಳ | : | ಮೈಸೂರು |

<u>ದಿನಾಂಕಃ **26-11-2019** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ -</u>

ನಾನು ದಿಃ07-09-2012 ರಿಂದ 13-07-2013 ರವರೆಗೆ ಲೋಕಾಯುಕ್ತ ಮೈಸೂರು ಇಲ್ಲಿ ಡಿ.ವೈ.ಎಸ್.ಪಿ. ಇಲ್ಲಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ23-11-2012 ರಂದು ನಾನು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಂತಹ ಸಂದರ್ಭದಲ್ಲಿ ಚಾಸಾ-1 ನನ್ನ ಮುಂದೆ ಹಾಜರಾಗಿ ನೀಡಿದಂತಹ ದೂರನ್ನು ಸ್ವೀಕರಿಸಿ, ಪ್ರಕರಣವನ್ನು ಠಾಣಾ ಮೊಕದ್ದಮೆ ಸಂಖ್ಯೆಃ20/2012 ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತೇನೆ. ಸದರಿ ದೂರನ್ನು ಈಗಾಗಲೇ ನಿಪಿ-35 ಎಂದು, ನಿಪಿ-35 ರಲ್ಲಿರುವ ಸಾಕ್ಷಿಯ ಸಹಿಯನ್ನು ಹಾಗೂ ಹಿಂಬರಹವನ್ನು ನಿಪಿ-35(ಬಿ) ಎಂದು ಗುರುತಿಸಲಾಯಿತು.

3. ಪ್ರಕರಣವನ್ನು ದಾಖಲಿಸಿದ ನಂತರ ಪ್ರ.ವ.ವರದಿಯನ್ನು ತಯಾರಿಸಿ, ಮೇಲಾಧಿಕಾರಿಗಳು ಹಾಗೂ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಪ್ರ.ವ.ವರದಿಯನ್ನು ನಿಪಿ-43 ಎಂದು, ನಿಪಿ-43 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-43(ಎ) ಎಂದು ಗುರುತಿಸಲಾಯಿತು.

4. ಚಾಸಾ-1 ರವರಿಗೆ ಹೆಚ್.ಡಿ.ಕೋಟೆ ಪಟ್ಟಣ ಪಂಚಾಯಿತಿಗೆ ಹೊಲಿಗೆ ಯಂತ್ರವನ್ನು ಸರಬರಾಜು ಮಾಡಲು ಕರಾರು ನೀಡಲಾಗಿದ್ದು, ಸದರಿ ಕರಾರಿನಂತೆ ಚಾಸಾ-1 ರವರು ಸದರಿ ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡಿದ್ದು, ಚಾಸಾ-1 ರವರಿಗೆ 8,00,000/- ರೂ.

ಪಾವತಿಮಾಡಬೇಕಾಗಿದ್ದು, 7,00,000/- ರೂ. ಪಾವತಿಯಾಗಿದ್ದು, 1,00,000/- ರೂ. ಪಾವತಿಯಾಗಬೇಕಾಗಿದ್ದು, ಸದರಿ 1,00,000/- ರೂ.ಗಳನ್ನು ಪಾವತಿಸಲು 1 ಹಾಗೂ 2 ನೇ ಆರೋಪಿಗಳು 15,000/- ರೂ.ಗಳ ಲಂಚವನ್ನು ಚಾಸಾ-1 ರವರಿಂದ ಕೇಳಿರುವುದಾಗಿ ಚಾಸಾ-1 ರವರು ನೀಡಿದ ದೂರನ್ನು ಓದಿದ ಮೇರೆಗೆ ನನಗೆ ತಿಳಿಯಿತು. ಚಾಸಾ-1 ಸದರಿ ದೂರಿನೊಂದಿಗೆ 1 ಮತ್ತು 2 ನೇ ಆರೋಪಿಯೊಂದಿಗೆ ನಡೆದ ಸಂಭಾಷಣೆಯ ವಾಯ್ಸ್ ರೆಕಾರ್ಡರ್ ನ್ನು ಸಹ ನನ್ನ ಮುಂದೆ ಹಾಜರುಪಡಿಸಿದನು.

5. ನಂತರ ಅದೇ ದಿನ ಪಂಚಸಾಕ್ಷಿಗಳನ್ನಾಗಿ ಕಳುಹಿಸಲು ಸಾರಿಗೆ ಅಧಿಕಾರಿಗಳು, ಮೈಸೂರು ಪಶ್ಚಿಮರವರಿಗೆ ಪತ್ರವನ್ನು ಬರೆಯಲಾಯಿತು. ಸದರಿ ಮನವಿಯ ಮೇರೆಗೆ ಸಾರಿಗೆ ಅಧಿಕಾರಿಗಳು, ಮೈಸೂರು ಪಶ್ಚಿಮರವರು ಚಾಸಾ-2 ಹಾಗೂ ಚಾಸಾ-3 ಕಳುಹಿಸಿಕೊಟ್ಟರು. ಸಾರಿಗೆ ಅಧಿಕಾರಿಗಳಿಗೆ ಬರೆದ ಪತ್ರವನ್ನು ನಿಪಿ-44 ಎಂದು, ನಿಪಿ-44 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-44(ಎ) ಎಂದು ಗುರುತಿಸಲಾಯಿತು.

6. ಅದೇ ದಿನ ಚಾಸಾ-2 ಹಾಗೂ 3 ಮಧ್ಯಾಹ್ನ 12-00 ರ ಸುಮಾರಿಗೆ ನನ್ನ ಮುಂದೆ ಹಾಜರಾದರು. ಚಾಸಾ-2, 3 ರವರಿಗೆ ನನ್ನನ್ನು ಪರಿಚಯ ಮಾಡಿಕೊಂಡು ನಂತರ ಚಾಸಾ -1 ರವರಿಗೂ ಸಹ ಪರಿಚಯ ಮಾಡಿಕೊಟ್ಟೆನು. ಚಾಸಾ -2 ಹಾಗೂ 3 ರವರಿಗೆ ಚಾಸಾ-1 ನೀಡಿದ್ದ ದೂರಿನ ಪ್ರತಿಯನ್ನು ನೀಡಿ, ಓದಿ ತಿಳಿದುಕೊಳ್ಳಲು ಸೂಚಿಸಿದೆನು. ಚಾಸಾ -2 ಹಾಗೂ 3 ರವರಿಗೆ ಪ್ರಕರಣದಲ್ಲಿ ಪಂಚಸಾಕ್ಷಿಗಳಾಗಿ ಸಹಕರಿಸುವಂತೆ ಕೋರಿಕೊಂಡೆನು.

7. ಚಾಸಾ-1 ನನ್ನ ಮುಂದೆ ಹಾಜರುಪಡಿಸಿದ ಡಿಜಿಟಲ್ ವಾಯ್ಸ್ ರೆಕಾರ್ಡರ್ ನಲ್ಲಿದ್ದ ಸಂಭಾಷಣೆಯನ್ನು ಚಾಸಾ-2 ಹಾಗೂ 3 ರವರ ಮುಂದೆ ಹಾಕಿ ಕೇಳಿಸಲಾಯಿತು. ಸದರಿ ವಾಯ್ಸ್ ರೆಕಾರ್ಡರ್ ನಲ್ಲಿದ್ದ ಸಂಭಾಷಣೆಯನ್ನು ಲಿಖಿತ ರೂಪಕ್ಕೂ ಸಹ ಇಳಿಸಲಾಯಿತು. ಸಂಭಾಷಣೆಯನ್ನು ಲ್ಯಾಪ್ ಟಾಪ್ ಮೂಲಕ 2 ಸಿಡಿಗಳಾಗಿ ಪರಿವರ್ತಿಸಲಾಯಿತು.

8. ಚಾಸಾ-1 ನನ್ನ ಮುಂದೆ 1000-00 ರೂ.ಗಳ 3 ನೋಟುಗಳು ಹಾಗೂ 500-00 ರೂ.ಗಳ 24 ನೋಟುಗಳನ್ನು ಹಾಜರುಪಡಿಸಿದನು. ಸದರಿ ನೋಟುಗಳನ್ನು ನಾನು ಚಾಸಾ-2 ರವರ ಕೈಗೆ ಕೊಟ್ಟೆನು. ಚಾಸಾ-2 ರವರು ಸದರಿ ನೋಟುಗಳ ಸಂಖ್ಯೆಗಳನ್ನು ಹೇಳಿದ ಮೇರೆಗೆ, ಚಾಸಾ-3 ರವರು ಸದರಿ ನೋಟುಗಳ ಸಂಖ್ಯೆಗಳನ್ನು ಬಿಳಿಹಾಳೆಯಲ್ಲಿ ಬರೆದುಕೊಂಡರು. ಸದರಿ

ದಾಖಲೆಯನ್ನು ಈಗಾಗಲೇ ನಿಪಿ-1 ಎಂದು, ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಹೆಚ್) ಎಂದು ಗುರುತಿಸಲಾಯಿತು.

9. ಸದರಿ ನೋಟುಗಳಿಗೆ ನಮ್ಮ ಸಿಬ್ಬಂದಿಯ ಮೂಲಕ ಫಿನಾಪ್ತಲಿನ್ ಪೌಡರನ್ನು ಹಚ್ಚಿಸಲಾಯಿತು. ಸದರಿ ನೋಟುಗಳನ್ನು ಚಾಸಾ-2, ಚಾಸಾ-1 ರವರ ಪ್ಯಾಂಟಿನ ಬಲಭಾಗದ ಜೇಬಿಗೆ ಇಟ್ಟು ಆರೋಪಿಯು ಸದರಿ ಹಣವನ್ನು ಕೇಳಿದರೆ ಮಾತ್ರ ಕೊಡಬೇಕೆಂದು ಸೂಚಿಸಲಾಯಿತು. ಆರೋಪಿಯು ಹಣವನ್ನು ಸ್ವೀಕರಿಸಿದ ನಂತರ ತಲೆಯನ್ನು ಸವರಿ ಸೂಚನೆಯನ್ನು ನೀಡಬೇಕೆಂದು ನಾನು ಚಾಸಾ-1 ರವರಿಗೆ ಸೂಚಿಸಿದೆನು. ಸದರಿ ಹಣವನ್ನು ಯಾವ ಕಾರಣಕ್ಕೂ ಮುಟ್ಟಬಾರದು ಎಂದು ಚಾಸಾ-1 ರವರಿಗೆ ಸೂಚಿಸಲಾಯಿತು. ಚಾಸಾ-1 ರವರ ಜೇಬಿಗೆ ಹಣವನ್ನು ಇಡುವ ಮೊದಲು ಚಾಸಾ-1 ರವರ ಅಂಗಶೋಧನೆಯನ್ನು ಮಾಡಲಾಯಿತು.

10. ನಂತರ ನಮ್ಮ ಸಿಬ್ಬಂದಿಯವರು ಪ್ಲಾಸ್ಟಿಕ್ ಲೋಟದಲ್ಲಿ ಸೋಡಿಯಂ ಕಾರ್ಬೋನೇಟ್ ದ್ರವಣವನ್ನು ತಯಾರಿಸಿ, ಚಾಸಾ-2 ರವರ ಎರಡೂ ಕೈಗಳನ್ನು ತೊಳೆಯಲಾಯಿತು. ಸದರಿ ದ್ರವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ಕೈತೊಳೆದ ದ್ರವಣವನ್ನು ಪ್ರತ್ಯೇಕ ಬಾಟಲಿಗೆ ಹಾಕಿ ಸೀಲ್ ಮಾಡಲಾಯಿತು. ಕೈತೊಳೆದ ದ್ರವಣವನ್ನು ಹಾಕಿದ ಬಾಟಲಿಯನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ಚಾಸಾ-1 ರಿಂದ 3 ರವರಿಗೆ ಫಿನಾಪ್ತಲಿನ್ ಪೌಡರನ ಮಹತ್ವವನ್ನು ತಿಳಿಸಿ, ಮು.ಮಾ-1 ನ್ನು ಬೀರುವಿನಲ್ಲಿ ಇಡಲಾಯಿತು. ನಂತರ ಎಲ್ಲರೂ ತಮ್ಮ ತಮ್ಮ ಕೈಗಳನ್ನು ತೊಳೆದುಕೊಂಡರು.

11. ಚಾಸಾ-1 ರವರಿಗೆ ಒಂದು ವಾಯ್ಸ್ ರೆಕಾರ್ಡನ್ನು ಕೊಟ್ಟು ಅದನ್ನು ಉಪಯೋಗಿಸಿಸುವ ವಿಧಾನವನ್ನು ತಿಳಿಸಲಾಯಿತು.

12. ಸ್ಥಳದಲ್ಲಿ ಪ್ರಾಯೋಗಿಕ ಪಂಚನಾಮೆಯನ್ನು ಮಧ್ಯಾಹ್ನ 12-15 ರಿಂದ 1-45 ರವರೆಗೆ ಮಾಡಲಾಯಿತು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-3 ಎಂದು, ನಿಪಿ-3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಪೋಟೋಗಳನ್ನು ತೆಗೆಸಲಾಯಿತು. ಸದರಿ ಪೋಟೋಗಳನ್ನು ಒಟ್ಟಾಗಿ ನಿಪಿ-4 ರಿಂದ 16 ಎಂದು ಗುರುತಿಸಲಾಯಿತು.

13. ಅದೇ ದಿನ ಮಧ್ಯಾಹ್ನ 1-45 ಕ್ಕೆ ಎರಡು ಇಲಾಖಾ ವಾಹನದಲ್ಲಿ ನಾವುಗಳು ಹೆಚ್.ಡಿ.ಕೋಟೆ ಪಟ್ಟಣಪಂಚಾಯಿತಿ ಬಳಿ ಹೋದೆವು. ಚಾಸಾ-1 ಹಾಗೂ 2 ರನ್ನು ಪಟ್ಟಣ ಪಂಚಾಯಿತಿ ಕಛೇರಿ ಒಳಗೆ ಕಳುಹಿಸಿ, ನಾವುಗಳುಚಾಸಾ-1 ರವರ ಸೂಚನೆಗಾಗಿ ಸ್ವಲ್ಪ ದೂರದಲ್ಲಿ ಕಾಯುತ್ತಿದ್ದೆವು. ಚಾಸಾ-1, ಸಂಜೆ 4-25 ಕ್ಕೆ ಆರೋಪಿಗಳ ಕಛೇರಿಯಿಂದ ಹೊರಗೆ ಬಂದು ತನ್ನ ತಲೆಯನ್ನು ಸವರಿ ಸೂಚನೆಯನ್ನು ನೀಡಿದನು. ನಂತರ ನಾನು, ಟ್ರ್ಯಾಪ್ ತಂಡದ ಇತರ ಸದಸ್ಯರು ಆರೋಪಿಗಳ ಕಛೇರಿಯ ಒಳಗೆ ಹೋದೆವು. ಚಾಸಾ-1, 1 ನೇ ಆರೋಪಿಯನ್ನು ತೋರಿಸಿ, ಸದರಿ ವ್ಯಕ್ತಿ ತನ್ನಿಂದ 15,000/- ರೂ. ಗಳನ್ನು ಪಡೆದು ಎರಡು ಕೈಗಳಿಂದ ಏಣಿಸಿ, 10,000/- ರೂ.ಗಳನ್ನು ತನ್ನ ಬೀರುವಿನಲ್ಲಿ ಇಟ್ಟು, ಉಳಿದಿ 5,000/- ರೂ.ಗಳನ್ನು 2 ನೇ ಆರೋಪಿಗೆ ಕೊಟ್ಟಿರುವುದಾಗಿ, ನಂತರ 2 ನೇ ಆರೋಪಿಯು ಸದರಿ 5,000/- ರೂ.ಗಳನ್ನು 3 ನೇ ಆರೋಪಿಗೆ ಕೊಟ್ಟಿರವುದಾಗಿ, ನಂತರ 3 ನೇ ಆರೋಪಿಯು ಸದರಿ 5,000/- ರೂ.ಗಳನ್ನು ಪಕ್ಕದ ವರ್ಕ್ ಶಾಪಿನಲ್ಲಿ ಇದ್ದಂತಹ 4 ನೇ ಆರೋಪಿಗೆ ಹೋಗಿ ಕೊಟ್ಟಿರುವುದಾಗಿ ತಿಳಿಸಿದನು. ನಂತರ ನಮ್ಮ ಸಿಬ್ಬಂದಿಗಳು 4 ಜನ ಆರೋಪಿಗಳ ಎರಡೂ ಕೈಗಳನ್ನು ಹಿಡಿದುಕೊಂಡು, ವಶಕ್ಕೆ ಪಡೆದುಕೊಂಡರು. ನಾನು ಆರೋಪಿಗಳಿಗೆ ನನ್ನನ್ನು ಪರಿಚಯಿಸಿಕೊಂಡು, ತನಿಖೆಗೆ ಸಹಕರಿಸುವಂತೆ ತಿಳಿಸಿದೆನು.

14. ನಮ್ಮ ಸಿಬ್ಬಂದಿಗಳಿಂದ ಸೋಡಿಯಂ ಕಾರ್ಬೋನೆಟ್ ದ್ರವಣವನ್ನು ತಯಾರಿಸಲಾಯಿತು. 1 ನೇ ಆರೋಪಿಯ ಎರಡೂ ಕೈಗಳನ್ನು ದ್ರವಣದಲ್ಲಿ ತೊಳೆಸಲಾಯಿತು. ಸದರಿ ದ್ರವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ಸ್ಯಾಂಪಲ್ ದ್ರವಣವನ್ನು ಒಂದು ಬಾಟಲಿಗೆ ಹಾಕಲಾಯಿತು. ಸದರಿ ಬಾಟಲನ್ನು ಮು.ಮಾ-14 ಎಂದು ಗುರುತಿಸಲಾಯಿತು. ಬಲಗೈ ತೊಳೆದ ದ್ರವಣವನ್ನು ಹಾಕಿದ ಬಾಟಲನ್ನು ಈಗಾಗಲೇ ಮುಮಾ-2 ಹಾಗೂ ಎಡಗೈ ತೊಳೆದ ದ್ರವಣವನ್ನು ಹಾಕಿದ ಬಾಟಲನ್ನು ಈಗಾಗಲೇ ಮುಮಾ-3 ಎಂದು ಗುರುತಿಸಲಾಗಿದೆ. ಮಾದರಿ ಸೋಡಿಯಂ ಕಾರ್ಬೋನೆಟ್ ಪುಡಿಯನ್ನು ಒಂದು ಕವರಿಗೆ ಹಾಕಿ ಸೀಲ್ ಮಾಡಲಾಯಿತು. ಸದರಿ ಸೋಡಿಯಂ ಕಾರ್ಬೋನೆಟ್ ಪುಡಿಯನ್ನು ಮು.ಮಾ15 ಎಂದು ಗುರುತಿಸಲಾಯಿತು.

15. 2 ನೇ ಆರೋಪಿಯ ಬಲಕೈಯನ್ನು ದ್ರವಣದಲ್ಲಿ ತೊಳೆಸಲಾಯಿತು. ಸದರಿ ದ್ರವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ಬಲಗೈ ತೊಳೆದ ದ್ರವಣವನ್ನು ಹಾಕಿದ ಬಾಟಲನ್ನು ಈಗಾಗಲೇ ಮುಮಾ-5 ಎಂದು ಗುರುತಿಸಲಾಗಿದೆ.

16. 3 ನೇ ಆರೋಪಿಯ ಬಲಕೈಯನ್ನು ದ್ರವಣದಲ್ಲಿ ತೊಳೆಸಲಾಯಿತು. ಸದರಿ ದ್ರವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ಬಲಗೈ ತೊಳೆದ ದ್ರವಣವನ್ನು ಹಾಕಿದ ಬಾಟಲನ್ನು ಈಗಾಗಲೇ ಮುಮಾ-6 ಎಂದು ಗುರುತಿಸಲಾಗಿದೆ.

17. 4 ನೇ ಆರೋಪಿಯ ಬಲಗೈಯನ್ನು ದ್ರವಣದಲ್ಲಿ ತೊಳೆಸಲಾಯಿತು. ಸದರಿ ದ್ರವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ಬಲಗೈ ತೊಳೆದ ದ್ರವಣವನ್ನು ಹಾಕಿದ ಬಾಟಲನ್ನು ಈಗಾಗಲೇ ಮುಮಾ-7 ಎಂದು ಗುರುತಿಸಲಾಗಿದೆ.

18. 1 ನೇ ಆರೋಪಿಗೆ ಚಾಸಾ-1 ರಿಂದ ಸ್ವೀಕರಿಸಿದಹ ಣವನ್ನು ಹಾಜರುಪಡಿಸಲು ಹೇಳಿದ ಮೇರೆಗೆ, 1 ನೇ ಆರೋಪಿಯು ಬೀರುವಿನಿಂದ 10,000/- ರೂ.ಗಳನ್ನು ತೆಗೆದು ನನ್ನ ಮುಂದೆ ಹಾಜರುಪಡಿಸಿದನು. ಸದರಿ 10,000/- ರೂ.ಗಳನ್ನು ಚಾಸಾ-2 ರವರಿಗೆ ನೀಡಿದ್ದು, ಚಾಸಾ-2 ಹಾಗೂ 3 ರವರು ನಿಪಿ-1 ರಲ್ಲಿದ್ದ ನೋಟಿನ ಸಂಖ್ಯೆಗಳೊಂದಿಗೆ ತಾಳೆ ಮಾಡಿ ನೋಡಿ ತಾಳೆಯಾಗಿರುವುದಾಗಿ ತಿಳಿಸಿದರು. ಹತ್ತಿಯನ್ನು ಸೋಡಿಯಂ ಕಾರ್ಬೋನೇಟ್ ದ್ರವಣಕ್ಕೆ ಅದ್ದಿ, ಸದರಿ ಹತ್ತಿಯಿಂದ ಬೀರುವಿನ ಒಳಗೆ ಹಣವನ್ನು ಇಟ್ಟ ಜಾಗವನ್ನು ಒರೆಸಿದಾಗ, ಸದರಿ ಹತ್ತಿಯ ಬಣ್ಣವು ಬದಲಾಗಿರುವುದು ಕಂಡುಬಂತು. ಸದರಿ ಹತ್ತಿಯನ್ನು ಸಹ ಒಂದು ಕವರಿಗೆ ಹಾಕಿ ಸೀಲ್ ಮಾಡಲಾಯಿತು. ಸದರಿ ಹತ್ತಿಯನ್ನು ಈಗಾಗಲೇ ಮು.ಮಾ-11 ಎಂದು ಗುರುತಿಸಲಾಯಿತು.

19. ನಂತರ 4 ನೇ ಆರೋಪಿಗೆ, 3 ನೇ ಆರೋಪಿಯಿಂದ ಪಡೆದ 5,000/- ಹಾಜರುಪಡಿಸಲು ಹೇಳಿದ ಮೇರೆಗೆ, 4 ನೇ ಆರೋಪಿಯು ತನ್ನ ಪರ್ಸ್ನಿಂದ ಸದರಿ 5,000/- ರೂ.ಗಳನ್ನು ತೆಗೆದು ನನ್ನ ಮುಂದೆ ಹಾಜರುಪಡಿಸಿದನು. ಸದರಿ 5,000/- ರೂ.ಗಳನ್ನು ಚಾಸಾ-2 ರವರಿಗೆ ನೀಡಿದ್ದು, ಚಾಸಾ-2 ಹಾಗೂ 3 ರವರು ನಿಪಿ-1 ರಲ್ಲಿದ್ದ ನೋಟಿನ ಸಂಖ್ಯೆಗಳೊಂದಿಗೆ ತಾಳೆ ಮಾಡಿ ನೋಡಿ ತಾಳೆಯಾಗಿರುವುದಾಗಿ ತಿಳಿಸಿದರು. 4 ನೇ ಆರೋಪಿಯ ಪರ್ಸ್ ನ್ನು ಸಹ ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಪರ್ಸ್ ನ್ನು ಮು.ಮಾ-9 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಮು.ಮಾ-9 ನ್ನು ನೋಡಿ ಗುರುತಿಸಿರುತ್ತಾರೆ. ಹತ್ತಿಯನ್ನು

ಸೋಡಿಯಂ ಕಾರ್ಬೋನೇಟ್ ದ್ರವಣಕ್ಕೆ ಅದ್ದಿ, ಸದರಿ ಹತ್ತಿಯಿಂದ ಪರ್ಸಿನ ಒಳಗೆ ಒರೆಸಿದಾಗ ಸದರಿ ಹತ್ತಿಯ ಬಣ್ಣವು ಬದಲಾಗಿರುವುದು ಕಂಡುಬಂತು. ಸದರಿ ಹತ್ತಿಯನ್ನು ಸಹ ಒಂದು ಕವರಿಗೆ ಹಾಕಿ ಸೀಲ್ ಮಾಡಲಾಯಿತು. ಸದರಿ ಹತ್ತಿಯನ್ನು ಈಗಾಗಲೇ ಮು.ಮಾ-10 ಎಂದು ಗುರುತಿಸಲಾಯಿತು. ಸದರಿ ಹತ್ತಿಯನ್ನು ಅದ್ದಿದ ದ್ರವಣವನ್ನು ಬಾಟಲಿಗೆ ಹಾಕಿ ಸೀಲ್ ಮಾಡಲಾಯಿತು. ಸದರಿ ದ್ರವಣವನ್ನು ಈಗಾಗಲೇ ಮು.ಮಾ-8 ಎಂದು ಗುರುತಿಸಲಾಯಿತು.

20. ಚಾಸಾ-1 ರವರಿಗೆ ನೀಡಿದ ವಾಯ್ಸ್ ರೆಕಾರ್ಡರ್ ನ್ನು ಹಿಂಪಡೆದುಕೊಳ್ಳಲಾಯಿತು. ಸದರಿ ವಾಯ್ಸ್ ರೆಕಾರ್ಡರ್ ನಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಮೂಲಕ ಪಂಚಸಾಕ್ಷಿಗಳ ಮುಂದೆ ಹಾಕಿ ಕೇಳಿಸಲಾಯಿತು. ಲ್ಯಾಪ್ ಟಾಪ್ ಮೂಲಕ ವಾಯ್ಸ್ ರೆಕಾರ್ಡರ್ ನಲ್ಲಿದ್ದ ಸಂಭಾಷಣೆಯನ್ನು ಸಿಡಿಗೆ ಪರಿವರ್ತಿಸಿ, ಸಂಭಾಷಣೆಯನ್ನು ಲಿಖಿತ ರೂಪಕ್ಕೂ ಸಹ ಇಳಿಸಲಾಯಿತು.

21. ಸ್ಥಳದಲ್ಲಿ 1 ರಿಂದ 3 ನೇ ಆರೋಪಿಗಳಿಂದ ತಮ್ಮ ಸಮಜಾಯಿಷಿಗಳನ್ನು ಪಡೆದುಕೊಳ್ಳಲಾಯಿತು. ಸದರಿ ಸಮಜಾಯಿಷಿಗಳನ್ನು ನಿಪಿ-45 ರಿಂದ 47 ಎಂದು ಗುರುತಿಸಲಾಯಿತು. 4 ನೇ ಆರೋಪಿಯು ಸಮಜಾಯಿಷಿಯನ್ನು ನೀಡುವ ಸ್ಥಿತಿಯಲ್ಲಿಲ್ಲದ ಕಾರಣ, ಆತನಿಂದ ಯಾವುದೇ ಲಿಖಿತ ಸಮಜಾಯಿಷಿಯನ್ನು ಪಡೆದುಕೊಂಡಿರುವುದಿಲ್ಲ. 1 ರಿಂದ 3 ನೇ ಆರೋಪಿಗಳು ನೀಡಿದ್ದ ಸಮಜಾಯಿಷಿಯ ಬಗ್ಗೆ ಚಾಸಾ-1 ಹಾಗೂ 2 ರವರನ್ನು ವಿಚಾರಿಸಿದಾಗ, ಅವು ಸುಳ್ಳಿನಿಂದ ಕೂಡಿರುತ್ತವೆ ಎಂದು ತಿಳಿಸಿದರು.

22. ಚಾಸಾ-1 ರವರ ಗುತ್ತಿಗೆಗೆ ಸಂಬಂದಿಸಿದಂತೆ 2 ನೇ ಆರೋಪಿಯು ನನ್ನ ಮುಂದೆ ಕೆಲವು ದಾಖಲೆಗಳನ್ನು ಹಾಜರುಪಡಿಸಿದನು. ನಾನು ಸದರಿ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡೆನು. ಸದರಿ ದಾಖಲೆಗಳನ್ನು ಒಟ್ಟಾಗಿ ಈಗಾಗಲೇ ನಿಪಿ-18 ಎಂದು ಗುರುತಿಸಲಾಯಿತು.

23. ಸ್ಥಳದಲ್ಲಿ ನಾನು ಒಂದು ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ಕಚ್ಚಾ ನಕ್ಷೆಯನ್ನು ನಿಪಿ-48 ಎಂದು, ನಿಪಿ-48 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-48(ಎ) ಎಂದು ಗುರುತಿಸಲಾಯಿತು.

24. 1 ರಿಂದ 3ನೇ ಆರೋಪಿಗಳನ್ನು ದಸ್ತಗಿರಿ ಮಾಡಿದ ಬಗ್ಗೆ ಅವರ ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ನೀಡಲಾಯಿತು.

25. ಸ್ಥಳದಲ್ಲಿ ಟ್ರ್ಯಾಪ್ ಮಹಜರನ್ನು ತಯಾರಿಸಲಾಯಿತು. ಸದರಿ ಟ್ರ್ಯಾಪ್ ಮಹಜರನ್ನು ಈಗಾಗಲೇ ನಿಪಿ-32 ಎಂದು, ನಿಪಿ-32 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-32(ಸಿ) ಎಂದು ಗುರುತಿಸಲಾಯಿತು. ಟ್ರ್ಯಾಪ್ ಕಾಲದಲ್ಲಿ ಫೋಟೋಗಳನ್ನು ತೆಗೆಯಲಾಯಿತು. ಸದರಿ ಫೋಟೋಗಳನ್ನು ನಿಪಿ-19 ರಿಂದ 31 ಎಂದು ಗುರುತಿಸಲಾಯಿತು.

26. ಆರೋಪಿಗಳನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

27. ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ನಕ್ಷೆಯನ್ನು ತಯಾರಿಸಲು ಮನವಿಯನ್ನು ಸಲ್ಲಿಸಲಾಯಿತು. ಚಾಸಾ-2 ಸ್ಥಳವನ್ನು ತೋರಿಸಿದ ಮೇರೆಗೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ನಕ್ಷೆಯನ್ನು ತಯಾರಿಸಿ ನನಗೆ ಸಲ್ಲಿಸಿರುತ್ತಾರೆ. ಸದರಿ ನಕ್ಷೆಯನ್ನು ನಿಪಿ-49 ಎಂದು ಗುರುತಿಸಲಾಯಿತು.

28. ದಿಃ28-05-2013 ರಂದು ಚಾಸಾ-28 ರವರಿಗೆ ಪತ್ರ ಬರೆದು, 1 ರಿಂದ 3ನೇ ಆರೋಪಿಗಳ ಸೇವಾ ವಿವರಗಳನ್ನು ನೀಡುವಂತೆ ಮನವಿ ಸಲ್ಲಿಸಲಾಯಿತು. ಚಾಸಾ-28 , 1 ರಿಂದ 3ನೇ ಆರೋಪಿಗಳ ಸೇವಾ ವಿವರಗಳನ್ನು ದಿಃ31-05-2013 ರಂದು ನೀಡಿರುತ್ತಾರೆ. ಮನವಿಯನ್ನು ಈಗಾಗಲೇ ನಿಪಿ-39, ದಾಖಲೆಯನ್ನು ಈಗಾಗಲೇ ನಿಪಿ-40 ಎಂದು ಗುರುತಿಸಲಾಗಿದೆ.

29. ದಿಃ07-12-2012 ರಂದು ನಾನು ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ17-12-2012 ರಂದು ಚಾಸಾ-29 ರವರಿಂದ ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ನಿಪಿ-40 ಎಂದು, ನಿಪಿ-50 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-50(ಎ) ಎಂದು ಗುರುತಿಸಲಾಯಿತು.

30. 1 ರಿಂದ 3ನೇ ಆರೋಪಿಗಳನ್ನು ಅಭಿಯೋಜನೆಗೆ ಒಳಪಡಿಸಲು ಸಂಭಂದಪಟ್ಟ ಅಧಿಕಾರಿಗಳಿಗೆ ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡುವಂತೆ ಮನವಿಯನ್ನು ಸಲ್ಲಿಸಲಾಯಿತು.

**Spl.C.No.1/2014**
**P.W.-09**
**C.W.-31**

31. ನನ್ನ ತನಿಖಾವಧಿಯಲ್ಲಿ ನಾನು ಎಲ್ಲಾ ಸಾಕ್ಷಿದಾರರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ.

32. ಚಾಸಾ-1 ನನ್ನ ಮುಂದೆ ನಿಪಿ-36, 36(ಎ) ರಿಂದ 36(ಹೆಚ್) ರಂತೆ ಹೇಳಿಕೆ ನೀಡಿರುತ್ತಾರೆ. ಚಾಸಾ-3 ನನ್ನ ಮುಂದೆ ನಿಪಿ-18 ರಂತೆ ಹೇಳಿಕೆ ನೀಡಿರುತ್ತಾರೆ. ಚಾಸಾ-4 ನನ್ನ ಮುಂದೆ ನಿಪಿ-23 ರಂತೆ ಹೇಳಿಕೆ ನೀಡಿರುತ್ತಾರೆ.

33. ದಿಃ12-02-2013 ರಂದು ಚಾಸಾ-1 ರಿಂದ 3, 1 ರಿಂದ 3 ನೇ ಆರೋಪಿಗಳನ್ನು ಹಾಗೂ ಚಾಸಾ-26 ರವರನ್ನು ಲೋಕಾಯುಕ್ತ ಪೋಲೀಸ್ ಠಾಣೆಗೆ ಬರಮಾಡಿಕೊಂಡಿರುತ್ತೇನೆ. ಚಾಸಾ-26 ರವರ ಮುಂದೆ ನಿಪಿ-17 ಹಾಗೂ 34 ರಲ್ಲಿರುವ ಸಂಭಾಷಣೆಯನ್ನು ಹಾಕಿ, ಕೇಳಿಸಲಾಯಿತು. ಚಾಸಾ-26 ರವರು, ಚಾಸಾ-1, 1 ಹಾಗೂ 2 ನೇ ಆರೋಪಿಗಳ ಮಧ್ಯೆ ನಡೆದ ಸಂಭಾಷಣೆಯನ್ನು ಕೇಳಿ, 1 ಹಾಗೂ 2 ನೇ ಆರೋಪಿಗಳ ಧ್ವನಿಯನ್ನು ಗುರುತಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ಲಿಖಿತ ರೂಪಕ್ಕೆ ಇಳಿಸಿ, ಒಂದು ಮಹಜರನ್ನು ತಯಾರಿಸಲಾಯಿತು. ಸದರಿ ಮಹಜರನ್ನು ಈಗಾಗಲೇ ನಿಪಿ-33 ಎಂದು, ನಿಪಿ-33 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-33(ಸಿ) ಎಂದು ಗುರುತಿಸಲಾಯಿತು.

34. ನನ್ನ ತನಿಖಾವಧಿಯಲ್ಲಿ ನಾನು 4 ನೇ ಆರೋಪಿಯ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

35. ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.